StudentBounty.com

| | | |
|---|---|---|
| Test Paper | : | **II** |
| Test Subject | : | **POLITICAL SCIENCE** |
| Test Subject Code | : | **K-1411** |

Test Booklet Serial No. : ____________

OMR Sheet No. : ____________

Roll No. | | | | | | | |

(Figures as per admission card)

**Name & Signature of Invigilator/s**

Signature : ____________  Signature : ____________

Name : ____________  Name : ____________

**Paper : II**

**Subject : POLITICAL SCIENCE**

Time : 1 Hour 15 Minutes

Maximum Marks : 100

Number of Pages in this Booklet : **16**

Number of Questions in this Booklet : **50**

### ಅಭ್ಯರ್ಥಿಗಳಿಗೆ ಸೂಚನೆಗಳು

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಐವತ್ತು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಪ್ರಶ್ನೆಪುಸ್ತಿಕೆ ಸ್ವೀಕರಿಸಬೇಡಿ. ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
   (iii) ಈ ತಾಳೆ ನೋಡಿದ ಬಳಿಕ, ಪರೀಕ್ಷಾ ಪುಸ್ತಿಕೆ ಸಂಖ್ಯೆಯನ್ನು OMR ಹಾಳೆಯಲ್ಲಿ ನಮೂದಿಸತಕ್ಕದ್ದು ಮತ್ತು OMR ಹಾಳೆ ಸಂಖ್ಯೆಯನ್ನು ಈ ಪರೀಕ್ಷಾ ಪುಸ್ತಿಕೆಯಲ್ಲಿ ನಮೂದಿಸತಕ್ಕದ್ದು.
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ :** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆಗಳಿಗೆ ಉತ್ತರಗಳನ್ನು, **ಪತ್ರಿಕೆ I ಪುಸ್ತಿಕೆಯೊಳಗೆ ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ ಮಾತ್ರವೇ ಸೂಚಿಸತಕ್ಕದ್ದು.** OMR ಉತ್ತರ ಹಾಳೆಯಲ್ಲಿನ ಅಂಡಾಕೃತಿ ಹೊರತುಪಡಿಸಿ ಬೇರೆ ಯಾವುದೇ ಸ್ಥಳದಲ್ಲಿ ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. ಒಳಗೆ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬದ್ಧರಾಗಿರುತ್ತೀರಿ.
9. ಪರೀಕ್ಷೆಯ ಅಂತ್ಯದಲ್ಲಿ ಕಡ್ಡಾಯವಾಗಿ ಪರೀಕ್ಷಾ ಪ್ರಶ್ನೆಪುಸ್ತಿಕೆ ಮತ್ತು OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ ನಿಮ್ಮೊಂದಿಗೆ ಕೊಂಡೊಯ್ಯಬಾರದು.
10. **ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
11. **ಕ್ಯಾಲ್ಕುಲೇಟರ್ ಅಥವಾ ಲಾಗ್ ಟೇಬಲ್ ಇತ್ಯಾದಿಯ ಬಳಕೆಯನ್ನು ನಿಷೇಧಿಸಲಾಗಿದೆ.**
12. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**

### Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the Test Booklet Number should be entered in the OMR Sheet and the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the oval as indicated below on the correct response against each item.
   **Example :** (A) (B) ● (D)
   where (C) is the correct response.
5. Your responses to the items are to be indicated in the **OMR Sheet kept inside the Paper I Booklet only**. If you mark at any place other than in the ovals in the Answer Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test question booklet and OMR Answer Sheet to the invigilators at the end of the examination compulsorily and must not carry it with you outside the Examination Hall.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is no negative marks for incorrect answers.**



www.StudentBounty.com

StudentBounty.com

# ರಾಜ್ಯಶಾಸ್ತ್ರ
# POLITICAL SCIENCE
## ಪೇಪರ್ – II
## Paper – II

**ಸೂಚನೆ :** ಈ ಪತ್ರಿಕೆಯು ಪ್ರತಿಯೊಂದು **ಎರಡು (2)** ಅಂಕಗಳನ್ನು ಹೊಂದಿರುವ **ಐವತ್ತು (50)** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನು ಒಳಗೊಂಡಿದೆ. **ಎಲ್ಲ** ಪ್ರಶ್ನೆಗಳನ್ನೂ ಉತ್ತರಿಸಿ.

**Note :** This paper contains **fifty (50)** objective type questions, **each** question carries **two (2)** marks. Attempt **all** questions.

**1.** ಕೆಳಗಿನವರಲ್ಲಿ ಯಾರು ಆಧುನಿಕ ವೈಯಕ್ತಿಕವಾದವನ್ನು ವಿವರವಾಗಿ ಪ್ರತಿಪಾದಿಸಿದ್ದಾರೆ ?

(A) ಜಿ.ಡಬ್ಲ್ಯೂ.ಎಫ್. ಹೆಗೆಲ್

(B) ಸ್ಟೀಫನ್ ಲೀಕೋಕ್

(C) ಹೆರಾಲ್ಡ್.ಜೆ. ಲಾಸ್ಕಿ

(D) ಗ್ರಹಾಮ್ ವಾಲ್ಲಸ್

**2.** "ವರ್ಗ ವೈಷಮ್ಯದ ರಾಜಿ ಮಾಡಲಾಗದ ಸ್ಥಿತಿಯ ಉತ್ಪನ್ನ ಮತ್ತು ಅಭಿವ್ಯಕ್ತಿಯೇ ರಾಜ್ಯ" ಎಂದು ಯಾರು ಹೇಳಿದ್ದರು ?

(A) ಎಫ್.ಏಂಜೆಲ್ಸ್

(B) ವಿ.ಐ. ಲೆನಿನ್

(C) ಮಾಒತ್ಸೆ ತುಂಗ್

(D) ಅಂಟೋನಿಯೊ ಗ್ರಾಮ್ಸ್ಕಿ

**3.** ಕೆಳಗಿನವರಲ್ಲಿ ಯಾರು ರಾಜಕಾರಣಿಗಳನ್ನು ಕುಶಲಕರ್ಮಿಗಳಿಗೆ ಹೋಲಿಸಿದ್ದಾರೆ ?

(A) ಪ್ಲೇಟೊ

(B) ಕ್ಸೆನೊಫೊನ್

(C) ಅರಿಸ್ಟಾಟಲ್

(D) ನಿಕೊಲೊ ಮೆಕ್ಕೈವೆಲಿ

**4.** ಸ್ವಾತಂತ್ರ್ಯವನ್ನು ಕಾರ್ಯಕ್ಕೆ ಸ್ವಾತಂತ್ರ್ಯ ಮತ್ತು ಸ್ವಾತಂತ್ರ್ಯವನ್ನು ಒತ್ತಾಯ ಇಲ್ಲದಿರುವಿಕೆಯಾಗಿ ಪರಿಗಣಿಸುವುದರ ನಡುವೆ ಇರುವ ವ್ಯತ್ಯಾಸವನ್ನು ಮೊದಲಿಗೆ ಗುರ್ತಿಸಿದವರು ಯಾರು ?

(A) ನಿಕೊಲೊ ಮೆಕ್ಕೈವೆಲಿ

(B) ಜಾನ್ ಲೋಕೆ

(C) ಜಾನ್‌ಸ್ಟುವರ್ಟ್ ಮಿಲ್

(D) ಜೇಮ್ಸ್ ಮಿಲ್

**1.** Who among the following expounded modern individualism ?

(A) G.W.F. Hegel

(B) Stephen Leacock

(C) Harold J. Laski

(D) Graham Wallas

**2.** Who said "The state is the product and the manifestation of the irreconcilability of class antagonism ?

(A) F. Engels

(B) V.I. Lenin

(C) Mao Tse Tung

(D) Antonio Gramsci

**3.** Who among the following compared politicians to craftmen ?

(A) Plato

(B) Xenophon

(C) Aristotle

(D) Niccolo Machiavelli

**4.** The difference between liberty as the freedom to act and liberty as the absence of coercion was first recognised by

(A) Niccolo Machiavelli

(B) John Locke

(C) John Stuart Mill

(D) James Mill



www.StudentBounty.com

StudentBounty.com

5. ಸಮಾಜದಲ್ಲಿ ಶ್ರೇಣಿ ವ್ಯವಸ್ಥೆಯ ಮತ್ತು ದಮನೀಯ ಅಧಿಕಾರ ಸಂಬಂಧಗಳಿವೆ ಎನ್ನುವ ವಿಚಾರ ಯಾವುದರಲ್ಲಿ ಪ್ರತಿಫಲಿಸಲ್ಪಟ್ಟಿದೆ ?
   (A) ಬಹುಜನ ಪ್ರಭುತ್ವ
   (B) ಪರ್ಯಾಲೋಚಕ ಪ್ರಜಾಪ್ರಭುತ್ವ
   (C) ಮೂಲದ ಪ್ರಜಾಪ್ರಭುತ್ವ
   (D) ಕನಿಷ್ಠ ರೂಪೀಯತೆ

6. ಬಹುವ್ಯಾಪಕವಾದ ವಿಕೇಂದ್ರೀಕರಣ ಮತ್ತು ಸಹಕಾರದ ಪರಿಪಾಠವನ್ನಾಧರಿಸಿದ ಆರ್ಥಿಕ ಸ್ಥಿತಿಯನ್ನು ಸಮರ್ಥಿಸಿದವರು ಯಾರು ?
   (A) ರಬೀಂದ್ರನಾಥ ಟಾಗೋರ್
   (B) ಎಮ್.ಎನ್.ರೋಯ್
   (C) ಜವಾಹರ್‌ಲಾಲ್ ನೆಹರು
   (D) ಬಿ.ಆರ್.ಅಂಬೇಡ್ಕರ್

7. ಪಟ್ಟಿ I ನ್ನು ಪಟ್ಟಿ IIರೊಂದಿಗೆ ಹೊಂದಿಸಿರಿ ಮತ್ತು ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡು.

| ಪಟ್ಟಿ I | ಪಟ್ಟಿ II |
|---|---|
| (a) ಕಾನೂನು ಬದ್ಧ ಸಾರ್ವಭೌಮತ್ವ (ಪರಮಾಧಿಕಾರ) | (i) ಜೆ.ಜೆ. ರೂಸ್ಸೊ |
| (b) ರಾಜಕೀಯ ಸಾರ್ವಭೌಮತ್ವ | (ii) ಥೋಮಸ್ ಹೋಬ್ಸ್ |
| (c) ಜನಪ್ರಿಯ ಸಾರ್ವಭೌಮತ್ವ | (iii) ಹ್ಯೂಗೊ ಗ್ರೋಟಿಯಸ್ |
| (d) ಬಾಹ್ಯ ಸಾರ್ವಭೌಮತ್ವ | (iv) ಜಾನ್ ಲೋಖೆ |

| | a | b | c | d |
|---|---|---|---|---|
| (A) | (ii) | (iv) | (i) | (iii) |
| (B) | (iv) | (ii) | (iii) | (i) |
| (C) | (iii) | (iv) | (ii) | (i) |
| (D) | (iv) | (ii) | (i) | (iii) |

5. The idea that there are hie[illegible]nd oppressive power relations in s[illegible] reflected in
   (A) Polyarchy
   (B) Deliberative Democracy
   (C) Radical Democracy
   (D) Minimalism

6. The Indian political thinker who advocated the view that an economy based on widespread decentralisation and practice of co-operation was
   (A) Rabindranath Tagore
   (B) M.N. Roy
   (C) Jawaharlal Nehru
   (D) B. R. Ambedkar

7. Match List-I with List -II and select the correct answer from the codes given below :

| List-I | List-II |
|---|---|
| a) Legal sovereignty | (i) J. J. Rousseau |
| b) Political sovereignty | (ii) Thomas Hobbes |
| c) Popular sovereignty | (iii) Hugo Grotius |
| d) External sovereignty | (iv) John Locke |

| | a | b | c | d |
|---|---|---|---|---|
| (A) | (ii) | (iv) | (i) | (iii) |
| (B) | (iv) | (ii) | (iii) | (i) |
| (C) | (iii) | (iv) | (ii) | (i) |
| (D) | (iv) | (ii) | (i) | (iii) |



www.StudentBounty.com

8. ಪಟ್ಟಿ I ನ್ನು ಪಟ್ಟಿ II ರೊಂದಿಗೆ ಹೊಂದಿಸಿರಿ ಮತ್ತು ಕೆಳಗೆ ಕೊಟ್ಟ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡು.

| ಪಟ್ಟಿ I | ಪಟ್ಟಿ II |
|---|---|
| (a) ಸರಕಾರದ ತುಂಡುಗಳು | (i) ಜಿ.ಡಬ್ಲ್ಯು. ಎಫ್.ಹೆಗೆಲ್ |
| (b) ಹಕ್ಕುಗಳ ತತ್ವಶಾಸ್ತ್ರ | (ii) ಕಾರ್ಲ್ ಮಾರ್ಕ್ಸ್ |
| (c) De Homine | (iii) ಥೋಮಸ್ ಹೋಬ್ಸ್ |
| (d) ರಾಜ್ಯ ಮತ್ತು ಕ್ರಾಂತಿ | (iv) ಜೆರೆಮಿ ಬೆಂಥಮ್ |
| | (v) ವಿ.ಐ. ಲೆನಿನ್ |

ಸಂಕೇತಗಳು :

| | a | b | c | d |
|---|---|---|---|---|
| (A) | (v) | (i) | (iv) | (ii) |
| (B) | (iv) | (i) | (iii) | (v) |
| (C) | (v) | (iv) | (ii) | (iii) |
| (D) | (iv) | (iii) | (i) | (ii) |

9. "ಒಂದು ನ್ಯಾಯ ಪೂರ್ಣ ಸಮಾಜದಲ್ಲಿ ಪ್ರತಿಯೊಬ್ಬನೂ ತಾನು ಇರಿಸಿಕೊಂಡಿರುವುದಕ್ಕೆ ಅರ್ಹತೆ ಪಡೆದಿರುತ್ತಾನೆ. ಆದುದರಿಂದ, ಒಬ್ಬನಿಂದ ಏನೋ ಒಂದನ್ನು ತೆಗೆದುಕೊಂಡು ಅದನ್ನು ಇನ್ನೊಬ್ಬನಿಗೆ ಕೊಡುವುದು ಅನ್ಯಾಯವಾಗುತ್ತದೆ". ಕೆಳಗಿನವರಲ್ಲಿ ಯಾರು ಈ ಮಾತನ್ನು ಸಮರ್ಥಿಸಿದರು ?

(A) ಜಾನ್ ರಾವುಲ್ಸ್

(B) ರಾಬರ್ಟ್ ಕೆಪ್ಲನ್

(C) ರೋಬರ್ಟ್ ನೋಜಿಕ್

(D) ಮಹಾತ್ಮ ಗಾಂಧಿ

10. ಭಾರತದ ಸಾಮಾಜಿಕ (ಸಮಾಜದ) ರಚನೆಯ ಸಮಸ್ಯೆಗಳನ್ನು ಬಗೆಹರಿಸಲು ಮೂಲ ಸಾಮಾಜಿಕ ಪರಿಹಾರಕ್ಕೆ ಯಾರು ತಗಾದೆ ಮಾಡಿದ್ದಾರೆ ?

(A) ಅರಬಿಂದೋ ಘೋಶ್

(B) ವೀರ ಸಾವರ್ಕರ್

(C) ಬಿ.ಆರ್. ಅಂಬೇಡ್ಕರ್

(D) ಜಯಪ್ರಕಾಶ್ ನಾರಾಯಣ್

8. Match List I with List II and select the correct answer from the codes given below :

| List-I | List-II |
|---|---|
| (a) Fragments of Government | (i) G.W.F. Hegel |
| (b) Philosophy of Rights | (ii) Karl Marx |
| (c) De Homine | (iii) Thomas Hobbes |
| (d) State and Revolution | (iv) Jeremy Bentham |
| | (v) V. I. Lenin |

**Codes :**

| | a | b | c | d |
|---|---|---|---|---|
| (A) | (v) | (i) | (iv) | (ii) |
| (B) | (iv) | (i) | (iii) | (v) |
| (C) | (v) | (iv) | (ii) | (iii) |
| (D) | (iv) | (iii) | (i) | (ii) |

9. Who among the following advocated that "In a just society everyone is entitled to what they possess. Therefore it is unjust to take away something from one and give it to another".

(A) John Rawls

(B) Robert Kaplan

(C) Robert Nozick

(D) Mahatma Gandhi

10. Who demanded a radical social solution for solving the problems of Indian social structure ?

(A) Aurobindo Ghosh

(B) Veer Savarkar

(C) B. R. Ambedkar

(D) Jayaprakash Narayan



StudentBounty.com
www.StudentBounty.com

11. ಯಾವ ಮಾರ್ಗವನ್ನು ರಾಚನಿಕ ಕ್ರಿಯಾತ್ಮಕ ಮಾರ್ಗ ಎಂದೂ ತಿಳಿಯುತ್ತಾರೆ ?

(A) ಕಾನೂನು ಬದ್ಧ ಮಾರ್ಗ

(B) ಸಾಂಸ್ಥಿಕ ಮಾರ್ಗ

(C) ಚಾರಿತ್ರಿಕ ಮಾರ್ಗ

(D) ರಾಜಕೀಯ-ಸಮಾಜಶಾಸ್ತ್ರ ಮಾರ್ಗ

12. ಕೆಳಗಿನವುಗಳಲ್ಲಿ ಯಾವುದು ರಾಜಕೀಯ ಸಂಸ್ಕೃತಿ ಮಾರ್ಗದ ಅಧ್ಯಯನದಲ್ಲಿ ಎದುರಾಗುವ ಭಾವನಾತ್ಮಕ ಸಮಸ್ಯೆಯಾಗಿದೆ ?

(A) ಸಂಸ್ಕೃತಿಯ ಅರ್ಥ ನಿರೂಪಿಸುವಲ್ಲಿ ವಿದ್ವಾಂಸರೊಳಗೆ ಸಹಮತದ ಅಭಾವ

(B) ಸಂಸ್ಕೃತಿಯು ರಾಜಕಾರಣದ ವ್ಯಾಪ್ತಿಗೆ ಸೇರುವುದಿಲ್ಲ

(C) ಸಂಸ್ಕೃತಿಗಳು ಹೋಲಿಸಲಾಗದವುಗಳು

(D) ಎಲ್ಲ ಸಂಸ್ಕೃತಿಗಳೂ ಅಗತ್ಯವಾಗಿ ಒಂದೇ ಆಗಿವೆ

13. **ಪ್ರತಿಪಾದನೆ (A)** : ರಾಜಕೀಯ ವ್ಯವಸ್ಥೆಯಲ್ಲಿ ರಾಜಕೀಯ ಮೌಲ್ಯಗಳ ಅರಿವಿನ ಬಗ್ಗೆ ಪರಿಚಯಿಸುವಿಕೆಯು ರಾಜಕೀಯ ಸಂಸ್ಕೃತಿಯನ್ನು ಬಲಪಡಿಸುತ್ತದೆ.

**ಸಮರ್ಥನೆ (R)** : ಸಾರ್ವಜನಿಕರು ರಾಜಕೀಯ ಮೌಲ್ಯಗಳನ್ನು ತೀರ್ಮಾನಿಸಲು ಸಮರ್ಥರಿದ್ದಾರೆ. ಆದುದರಿಂದ ರಾಜಕೀಯ ಸಂಸ್ಕೃತಿಯನ್ನು ವ್ಯವಸ್ಥಿತವಾಗಿ ನಿರೂಪಿಸಲು ಸಹಾಯ ಮಾಡಬಹುದು.

ಮೇಲಿನ ಎರಡು ಹೇಳಿಕೆಗಳ ಸಂದರ್ಭದಲ್ಲಿ, ಕೆಳಗಿನವುಗಳಲ್ಲಿ ಯಾವುದು ಸರಿ ?

(A) (A) ಮತ್ತು (R) ಎರಡು ಕೂಡ ಸರಿ ಮತ್ತು (R) ಎಂಬುದು (A) ಯ ಸರಿಯಾದ ವಿವರಣೆ

(B) (A) ಮತ್ತು (R) ಎರಡು ಕೂಡ ಸರಿ. ಆದರೆ (R) ಎಂಬುದು (A) ಯ ಸರಿಯಾದ ವಿವರಣೆ ಅಲ್ಲ

(C) (A)ಯು ಸರಿ ಆದರೆ (R) ತಪ್ಪು

(D) (A)ಯು ತಪ್ಪು ಆದರೆ (R) ಸರಿ

11. Which approach is also [the] structural functional approac[h]

(A) Legal Approach

(B) Institutional Approach

(C) Historical Approach

(D) Political-Sociology Approach

12. One of the following is a conceptual problem faced in the study of political culture approach

(A) Lack of consensus among scholars in defining culture

(B) Culture does not belong to the domain of politics

(C) Cultures are incomparable

(D) All cultures are essentially the same

13. Given below are two statements, one labelled as assertion (A) and the other labelled as Reason (R)

**Assertion (A)** : The cognitive orientation of political values strengthens political culture in a political system.

**Reason (R)** : The public are in a position to judge political values and therefore can help in formulating political culture.

In the context of above two statements which one of the following is correct ?

(A) Both (A) and (R) are true but (R) is the correct explanation of (A)

(B) Both (A) and (R) are true but (R) is not the correct explanation of (A)

(C) (A) is true but (R) is false

(D) (A) is false but (R) is true



StudentBounty.com
www.StudentBounty.com

StudentBounty.com

14. **ಪ್ರತಿಪಾದನೆ (A)** : ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ರಾಜಕೀಯ ಪ್ರಕ್ರಿಯೆಯು ಸಂಪ್ರದಾಯ ಮತ್ತು ಆಧುನಿಕತೆಯ ಅಂಶಗಳಿಂದ ಸತತವಾಗಿ ಪ್ರಭಾವಕ್ಕೊಳಗಾಗಿದೆ.

**ಸಮರ್ಥನೆ (R)** : ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ರಾಜಕೀಯ ಬೆಳವಣಿಗೆಗಳು ಚಾರಿತ್ರಿಕ ಬಲಗಳ ಮತ್ತು ಸಮಕಾಲೀನ ಕೋರಿಕೆಗಳ ವಿವಾದಾಂಶಗಳನ್ನು ಅವಲಂಬಿಸಿದೆ.

(A) (A) ಮತ್ತು (R) ಎರಡು ಕೂಡ ಸರಿ ಮತ್ತು (R) ಎಂಬುದು (A) ಯ ಸರಿಯಾದ ವಿವರಣೆ
(B) (A) ಮತ್ತು (R) ಎರಡು ಕೂಡ ಸರಿ ಆದರೆ (R) ಎಂಬುದು (A) ಯ ಸರಿಯಾದ ವಿವರಣೆ ಅಲ್ಲ
(C) (A)ಯು ಸರಿ ಆದರೆ (R) ತಪ್ಪು
(D) (A)ಯು ತಪ್ಪು ಆದರೆ (R) ಸರಿ

15. ಒಂದು ಒಕ್ಕೂಟದಲ್ಲಿ, ಸಮರ್ಥ ರಾಜ್ಯಗಳ ಸ್ವ ಆಳ್ವಿಕೆಯ ಸ್ಥಾನಮಾನವು ಮಾದರಿಯಾಗಿ
(A) ಕೇಂದ್ರ ಸರಕಾರದ ತೀರ್ಮಾನಗಳಿಂದ ಬದಲಾಗಿದೆ
(B) ಸ್ವಭಾವದಲ್ಲಿ ಅಸ್ಥಿರ
(C) ಸಂವಿಧಾನದಲ್ಲಿ ಭದ್ರವಾಗಿ ಬೇರೂರಿದೆ
(D) ರಾಜ್ಯದ ಮುಖ್ಯಸ್ಥನ ಅಧೀನದಲ್ಲಿದೆ

16. ತುಲನಾತ್ಮಕ ರಾಜಕಾರಣದ ಅಧ್ಯಯನದಲ್ಲಿ ರಾಜಕೀಯ ಆರ್ಥಿಕ ಸ್ಥಿತಿ ವಿಶ್ಲೇಷಣೆಯನ್ನು ಪ್ರತಿಪಾದಿಸಿದವರು
(A) ವಿಲ್ಲಿಯಂ ರಿಕ್ಕರ್
(B) ರೋಜರ್ ಚಾರ್ಲ್‌ಟನ್
(C) ರೊನಾಲ್ಡ್ ಹೆಚ್. ಚಿಲ್‌ಕೋಟ್
(D) ಗೇಬ್ರಿಯೆಲ್ ಅಲ್‌ಮಾಂಡ್ ಮತ್ತು ಜಿ.ಬಿ. ಪೋವೆಲ್

17. ಅವಲಂಬನೆ ಸಿದ್ಧಾಂತಗಳು ಪ್ರಾಥಮಿಕವಾಗಿ ಯಾವುದರ ಮೇಲೆ ಕೇಂದ್ರೀಕರಿಸಿದೆ ?
(A) ಮಹಾನಗರಗಳಿಂದ ಹಳ್ಳಿಗಳಿಗೆ ಸಂಪನ್ಮೂಲಗಳ ವರ್ಗಾವಣೆ
(B) ಮಹಾನಗರಗಳಿಗೆ ಲಾಭ
(C) ಹೊರವಲಯಕ್ಕೆ ಅನಾನುಕೂಲತೆಗಳು
(D) ಆರ್ಥಿಕ ಸ್ಥಗಿತದ ಕಾರಣಗಳು

14. **Assertion (A)** : In developing political process is conti influenced by the factors of tradition modernity.

**Reason (R)** : Political developments in developing countries are conditioned by issues of historical forces and contemporary demands.

(A) Both (A) and (R) are true and (R) is the correct explanation of (A)
(B) Both (A) and (R) are true but (R) is not the correct explanation of (A)
(C) (A) is true but (R) is false
(D) (A) is false but (R) is true

15. In a federation the self-governing status of the component states is typically
(A) Altered by the decisions of Central Government
(B) Unstable in nature
(C) Entrenched in the Constitution
(D) At the mercy of the head of the state

16. Political Economy analysis in the study of comparative politics is propounded by
(A) William Riker
(B) Roger Charlton
(C) Ronald H. Chilcote
(D) Gabriel Almond and G.B. Powell

17. Dependency theories primarily focus on
(A) Transfer of resources from metropolis to villages
(B) Gains to metropolis
(C) The disadvantages to the periphery
(D) Causes of economic stagnation



www.StudentBounty.com

18. ಪಟ್ಟಿ I ನ್ನು ಪಟ್ಟಿ IIರೊಂದಿಗೆ ಹೊಂದಿಸಿರಿ ಮತ್ತು ಕೆಳಗೆ ಕೊಟ್ಟ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ I | ಪಟ್ಟಿ II |
|---|---|
| (a) ಆಸಕ್ತಿ ಸಂದುಗೂಡಿಕೆ | (i) ಸಾಮಾಜಿಕ ಬಂಡವಾಳ |
| (b) ರಾಜಕೀಯ ಅಭಿವೃದ್ಧಿ | (ii) ಸಹಾಯ ಅನುದಾನ |
| (c) ಸಹಕಾರಿ ಸಂಯುಕ್ತ ವ್ಯವಸ್ಥೆ | (iii) ಸ್ಯಾಮುಎಲ್.ಪಿ. ಹಂಟಿಂಗ್ಟನ್ |
| (d) ನಾಗರಿಕ ಸ್ವಾತಂತ್ರ್ಯ | (iv) ಒತ್ತಡ ಗುಂಪುಗಳು |

**ಸಂಕೇತಗಳು :**

| | a | b | c | d |
|---|---|---|---|---|
| (A) | (i) | (ii) | (iii) | (iv) |
| (B) | (i) | (iv) | (ii) | (iii) |
| (C) | (iv) | (iii) | (ii) | (i) |
| (D) | (ii) | (iii) | (iv) | (i) |

19. ಆಧುನಿಕ ಪ್ರಜಾಪ್ರಭುತ್ವದ ಯಶಸ್ಸಿಗೆ ಸಾಮಾಜಿಕ ಬಂಡವಾಳ ರೂಪಿಸುವುದು ನಿರ್ಧಾರಕವಾಗಿದೆ ಎಂಬ ಅಭಿಪ್ರಾಯಕ್ಕೆ ಕೆಳಗಿನವರಲ್ಲಿ ಯಾರು ಒತ್ತುಕೊಟ್ಟರು ?
   (A) ಥೋಮಸ್ ಎಲ್.ಫ್ರೀಡ್‌ಮ್ಯಾನ್
   (B) ರೋಬರ್ಟ್ ಎ. ಡಾಲ್
   (C) ಜೋನ್ ರಾವುಲ್ಸ್
   (D) ರೋಬರ್ಟ್ ಪುಟ್‌ನ್ಯಾಮ್

20. ಯಾವುದರ ಹಿನ್ನೆಲೆಯಲ್ಲಿ ಯು.ಎಸ್. ಒಕ್ಕೂಟ ವ್ಯವಸ್ಥೆಯಲ್ಲಿ ಸಹಕಾರಿ ಸಂಯುಕ್ತ ವ್ಯವಸ್ಥೆಯನ್ನು ಕಂಡುಹಿಡಿಯಲಾಯಿತು ?
   (A) ಶೀತಲ ಯುದ್ಧ ಬೆಳವಣಿಗೆಗಳು
   (B) ಶೀತಲ ಯುದ್ಧದ ನಂತರದ ಘಟನಾವಳಿಗಳು
   (C) ಯು.ಎಸ್.ಎ.ಯಲ್ಲಿ ನಾಗರಿಕ ಯುದ್ಧ (ಅಂತರ್ಯುದ್ಧ)
   (D) ಹೊಸ ಯೋಜನೆ (ಹೊಸನೀತಿ) ಕ್ರಮಗಳು

18. Match List I with List II and select the correct answer from the codes given below :

| List I | List II |
|---|---|
| a) Interest articulation | (i) Social capital |
| b) Political development | (ii) Grants-in-aid |
| c) Co-operative Federalism | (iii) Samuel P. Huntington |
| d) Civil society | (iv) Pressue groups |

**Codes :**

| | a | b | c | d |
|---|---|---|---|---|
| (A) | (i) | (ii) | (iii) | (iv) |
| (B) | (i) | (iv) | (ii) | (iii) |
| (C) | (iv) | (iii) | (ii) | (i) |
| (D) | (ii) | (iii) | (iv) | (i) |

19. Who among the following emphasised the idea that social capital formation is crucial to the success of modern democracy ?
   (A) Thomas L. Friedman
   (B) Robert A. Dahl
   (C) John Rawls
   (D) Robert Putnam

20. Co-operative federalism was invented in the U.S. federal system in the backdrop of
   (A) Cold war developments
   (B) Post cold war scenario
   (C) Civil war in U.S.A.
   (D) New deal measures



www.StudentBounty.com

StudentBounty.com

21. ನಿರ್ವಾಚಕ ಗಣದಿಂದ ಅವಿರೋಧವಾಗಿ ಆಯ್ಕೆಯಾದ ಭಾರತದ ರಾಷ್ಟ್ರಪತಿಯ ಹೆಸರೇನು ?
(A) ನೀಲಂ ಸಂಜೀವ ರೆಡ್ಡಿ
(B) ಕೆ.ಆರ್. ನಾರಾಯಣನ್
(C) ಡಾ. ರಾಜೇಂದ್ರ ಪ್ರಸಾದ್
(D) ಅಬ್ದುಲ್ ಕಲಾಂ

22. ಕೆಳಗಿನ ಯಾವುದಕ್ಕೆ ಸಂಬಂಧಪಟ್ಟ ತೀರ್ಪಿನಲ್ಲಿ ಸುಪ್ರೀಮ್ ಕೋರ್ಟು (ಸರ್ವೋಚ್ಚ ನ್ಯಾಯಾಲಯ) ಸಂವಿಧಾನದ ಆಶಯ ಮತ್ತು ಮೂಲ ರಚನೆಗಳ ಉಲ್ಲಂಘನೆ ಮಾಡಲಾಗದಿರುವಿಕೆಯ ಮೇಲೆ ಬೆಳಕು ಚೆಲ್ಲಿದೆ ?
(A) ಮೇನಕ ಗಾಂಧಿ ಪ್ರಕರಣ
(B) ಮಿನರ್ವ ಮಿಲ್‌ನ ಪ್ರಕರಣ
(C) ಗೋಲಕ್‌ನಾಥ್ ಪ್ರಕರಣ
(D) ಕೇಶವಾನಂದ ಭಾರತಿ ಪ್ರಕರಣ

23. ಭಾರತದ ರಾಜ್ಯಗಳಲ್ಲಿನ ರಾಜಕೀಯ ಅಸ್ಥಿರತೆಯನ್ನು ಕೆಳಗಿನ ಯಾವುದಕ್ಕೆ ಸಂಬಂಧಿಸಿ ಹೇಳಬಹುದು ?
(A) ರಾಜಕೀಯ ಪಕ್ಷದ ಒಳಗಿನ ಗುಂಪುಗಾರಿಕೆಯ ವೈಷಮ್ಯ
(B) ಏಕ ಪಕ್ಷ ಪ್ರಾಧಾನ್ಯತೆ
(C) ಬಹುದೊಡ್ಡ ಜನಸಂಖ್ಯೆ
(D) ದುರ್ಬಲ ಶಾಸಕಾಂಗಗಳು

24. ಪ್ರಸ್ತಾವನೆಯ ತಯಾರಿಯ ಹಿಂದೆ ಪ್ರೇರಣೆಯನ್ನೊದಗಿಸುತ್ತಿದ್ದ ಬಲ ಯಾರು ?
(A) ಜವಾಹರಲಾಲ್ ನೆಹರು
(B) ಸರ್ದಾರ್ ವಲ್ಲಭ ಭ್ಯಾ ಪಟೇಲ್
(C) ಮಹಾತ್ಮಾಗಾಂಧಿ
(D) ಬಾಬಾಸಾಹೇಬ್ ಅಂಬೇಡ್ಕರ್

25. ಆರ್ಥಿಕ ಮತ್ತು ಸಾಮಾಜಿಕ ಯೋಜನೆ ಯಾವುದರಡಿಯಲ್ಲಿ ಬರುತ್ತದೆ ?
(A) ಕೇಂದ್ರ ಪಟ್ಟಿ
(B) ರಾಜ್ಯಪಟ್ಟಿ
(C) ಸಮವರ್ತಿ ಪಟ್ಟಿ
(D) ಉಳಿಕೆ ಅಧಿಕಾರಗಳು

21. Name the President of Ind s elected unopposed by the e college.
(A) Neelam Sanjeev Reddy
(B) K. R. Narayanan
(C) Dr. Rajendra Prasad
(D) Abdul Kalam

22. The non-violability of the basic structure and spirit of the Constitution was highlighted by the Supreme Court in the judgement related to
(A) Menaka Gandhi Case
(B) Minerva Mills Case
(C) Golaknath Case
(D) Keshavananda Bharathi Case

23. Political instability in Indian States may be attributed to
(A) Factional rivalry within political parties
(B) Single party dominance
(C) Large population
(D) Weak legislatures

24. Who was the motivating force behind the preparation of preamble ?
(A) Jawaharlal Nehru
(B) Sardar Vallabhbhai Patel
(C) Mahatma Gandhi
(D) Babasaheb Ambedkar

25. The economic and social planning comes under
(A) Union list
(B) State list
(C) Concurrent list
(D) Residuary powers



www.StudentBounty.com

26. ಕೆಳಗಿನವುಗಳಲ್ಲಿ ಯಾವುದನ್ನು ವಿಸರ್ಜಿಸಲಾಗದು ಆದರೆ ತೆಗೆದು ಹಾಕಬಹುದು ?

(A) ರಾಜ್ಯ ವಿಧಾನ ಪರಿಷತ್ತು

(B) ರಾಜ್ಯ ವಿಧಾನ ಸಭೆ

(C) ರಾಜ್ಯ ಸಭೆ

(D) ಲೋಕ ಸಭೆ

27. 1990ರ ಸಂವಿಧಾನದ 66ನೇ ತಿದ್ದುಪಡಿಯ ಮಹತ್ವವೇನು ?

(A) ಪಂಜಾಬಿನಲ್ಲಿ ರಾಷ್ಟ್ರಪತಿ ಆಳ್ವಿಕೆ ವಿಸ್ತರಿಸಲು ಅವಕಾಶ ಮಾಡಿಕೊಟ್ಟಿತು

(B) ವಿವಿಧ ರಾಜ್ಯಗಳ ಭೂ ಸುಧಾರಣಾ ಅಧಿನಿಯಮಗಳನ್ನು ಸಂವಿಧಾನದ 9ನೇ ಅನುಸೂಚಿಯ ಅಡಿಯಲ್ಲಿ ತರುವುದು

(C) ಮತದಾರರ ಕನಿಷ್ಠ ಪ್ರಾಯವನ್ನು 21 ರಿಂದ 18ಕ್ಕೆ ಇಳಿಸಿತು

(D) ಎಸ್.ಸಿ., ಎಸ್.ಟಿ., ಒ.ಬಿ.ಸಿ. ಅವರಿಗೆ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಸೀಟುಗಳನ್ನು ಮೀಸಲು ಇಡಲು ರಾಜ್ಯಗಳಿಗೆ ಸಾಧ್ಯಮಾಡಿ ಕೊಟ್ಟಿತು

28. ಭಾರತ ಒಕ್ಕೂಟದ ರಾಜ್ಯಗಳ ನಡುವೆ ಸಹಕಾರವನ್ನು ಪ್ರೋತ್ಸಾಹಿಸಲು ಅಂತರ್ರಾಜ್ಯ ಮಂಡಳಿ ರಚನೆಗೆ ಭಾರತದ ಸಂವಿಧಾನದ ಯಾವ ಅನುಚ್ಛೇದ ಅವಕಾಶ ಒದಗಿಸಿದೆ ?

(A) ಅನುಚ್ಛೇದ 305

(B) ಅನುಚ್ಛೇದ 357

(C) ಅನುಚ್ಛೇದ 263

(D) ಅನುಚ್ಛೇದ 272

29. ಕೆ.ಎಂ. ಮುನ್‌ಶಿಯವರು ಭಾರತದ ಸಂವಿಧಾನದ ಯಾವ ಭಾಗವನ್ನು 'ರಾಜಕೀಯ ಜಾತಕ' ಎಂದು ವರ್ಣಿಸಿದ್ದಾರೆ ?

(A) ಪ್ರಸ್ತಾವನೆ

(B) ಮೂಲಭೂತ ಹಕ್ಕುಗಳು

(C) ಮೂಲಭೂತ ಕರ್ತವ್ಯಗಳು

(D) ದುರ್ಬಲ ವರ್ಗದವರಿಗೆ ವಿಶೇಷ ಸವಲತ್ತುಗಳು

26. Which one of the follow[...] be dissolved but can be abolished ?

(A) State Legislative Councils

(B) State Legislative Assemblies

(C) Rajya Sabha

(D) Lok Sabha

27. What was the significance of sixty sixth Constitutional Amendment of 1990 ?

(A) Made provision for the extension of President's rule in Punjab

(B) Land Reforms Act of various States were brought under 9th schedule

(C) Reduced the voting age from 21 to 18

(D) Enabled states to reserve seats in private unaided educational institutions for SCs, STs and OBCs.

28. Which Article in Indian Constitution provides for Inter-State Council for promoting co-operation between states of the Indian Union ?

(A) Article 305

(B) Article 357

(C) Article 263

(D) Article 272

29. Which part of the Indian Constitution is described by K. M. Munshi as the "Political horoscope" ?

(A) The Preamble

(B) Fundamental Rights

(C) Fundamental Duties

(D) Special provisions for weaker sections



StudentBounty.com
www.StudentBounty.com

30. ಕೆಳಗಿನವುಗಳಲ್ಲಿ ಸರಕಾರಿ ಚಟುವಟಿಕೆಗಳ ಮೇಲೆ ಸಾರ್ವಜನಿಕ ಕ್ಷೇತ್ರದಲ್ಲಿ ಸೂಕ್ಷ್ಮ ಪರಿಶೀಲನೆ ಉಳಿಸಿಕೊಳ್ಳಲು ಅತ್ಯಂತ ಜನಪ್ರಿಯ ಕ್ರಮವನ್ನು ಗುರುತಿಸು.

(A) ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ

(B) ನ್ಯಾಯಿಕ ವಿಮರ್ಶೆ

(C) ಮಾಹಿತಿ ಹಕ್ಕು ಅಧಿನಿಯಮ

(D) ನ್ಯಾಯಿಕ ಕ್ರಿಯಾವಾದ

31. ಸಂಸ್ಥೆಯ ರಾಚನಿಕ ಸಿದ್ಧಾಂತವನ್ನು ಏನೆಂದೂ ತಿಳಿಯುತ್ತೇವೆ ?

(A) ಅಧಿಕಾರ ಶಾಹಿಯ ಸಿದ್ಧಾಂತ

(B) ಪ್ರಾಚೀನ/ಶ್ರೇಷ್ಠ ಸಿದ್ಧಾಂತ

(C) ವರ್ತನೆಗೆ ಸಂಬಂಧಿಸಿದ ಸಿದ್ಧಾಂತ

(D) ವ್ಯವಸ್ಥೆಗಳ ಸಿದ್ಧಾಂತ

32. ಮೂರನೆ ಜಗತ್ತಿನಲ್ಲಿ ಕೈಗಾರಿಕಾ ಬೆಳವಣಿಗೆ ಇಲ್ಲದಿರಲು (ಕೊರತೆ ಇರಲು) ಕಾರಣ ಅದರ ಆರ್ಥಿಕ ಸಂಪನ್ಮೂಲಗಳನ್ನು ಮತ್ತು ಹೆಚ್ಚುವರಿಯನ್ನು ಉತ್ತರದ ಕಡೆಗೆ ಮಹಾನಗರಗಳ ಕೇಂದ್ರಕ್ಕೆ ಹರಿಸಿಬಿಡುವುದೇ ಆಗಿದೆ ಎಂದು ಯಾರು ವಾದ ಮಾಡಿದರು ?

(A) ಪರಾವಲಂಬನ ಸಿದ್ಧಾಂತಿಗಳು

(B) ಕಡಿಮೆ ಅಭಿವೃದ್ಧಿ ಸಿದ್ಧಾಂತಿಗಳು

(C) ರಾಜಕೀಯ ಆರ್ಥಿಕತೆ ಸಿದ್ಧಾಂತಿಗಳು

(D) ಆಧುನಿಕೀಕರಣ ಸಿದ್ಧಾಂತಿಗಳು

33. ಕೆಳಗಿನವುಗಳಲ್ಲಿ ಯಾವುದು ಮುಂಗಡ ಪತ್ರ ತಯಾರಿಕೆಯ ಒಂದು ಭಾಗ (ಅಂಶ) ಅಲ್ಲ ?

(A) ಅಡ್ಡಿ ನಿವಾರಣೆ

(B) ಅಂದಾಜುಗಳು ನಗದು ಆಧಾರಿತವಾಗಿರತಕ್ಕದ್ದು

(C) ರದ್ದು (ರದ್ದಿಯಾತಿ) ನಿಯಮ

(D) ನಿವ್ವಳ ಆದಾಯದ ಆಧಾರದಲ್ಲಿ ಮುಂಗಡ ಪತ್ರ ತಯಾರಿಸಲ್ಪಡುತ್ತದೆ

30. Identify among the follow st popular measure for maintaining in public sphere on governm activities.

(A) Public Interest Litigation

(B) Judicial Review

(C) Right to Information Act

(D) Judicial Activism

31. Structural theory of organisation is also known as

(A) Bureaucratic theory

(B) Classical theory

(C) Behavioralist theory

(D) Systems theory

32. Who argued that the "lack of industrial development in the third world is due to its economic resources and 'surplus' being drained North words to the 'Metropolitan' centres" ?

(A) Dependency theorists

(B) Under development theorists

(C) Political economy theorists

(D) Modernisation theorists

33. Which one of the following is not a part of the budget making ?

(A) Guillotine

(B) Estimates should be on cash basis

(C) Rule of lapse

(D) Budget is prepared on the basis of net income

StudentBounty.com



www.StudentBounty.com

StudentBounty.com

34. ಬುದ್ಧಿವಂತಿಕೆಯ ಚಟುವಟಿಕೆ, ವಿನ್ಯಾಸದ ಚಟುವಟಿಕೆ ಮತ್ತು ಆಯ್ಕೆಯ ಚಟುವಟಿಕೆ ಸಾರ್ವಜನಿಕ ಆಡಳಿತದಲ್ಲಿ ಯಾವುದಕ್ಕೆ ಸಂಬಂಧ ಪಟ್ಟಿದೆ ?
   - (A) ನಿಯಂತ್ರಣದ (ಆದೇಶದ) ಏಕತೆ
   - (B) ಶ್ರೇಣಿ ಪದ್ಧತಿ
   - (C) ತೀರ್ಮಾನ ಮಾಡುವಿಕೆ
   - (D) ಅಧಿಕಾರ

35. ಲೆಕ್ಕ ಪರಿಶೋಧನೆಯು ಕೆಳಗಿನ ಯಾವುದನ್ನು ಪತ್ತೆ ಮಾಡಲು ಸಾಧ್ಯವಾಗಿಸುತ್ತದೆ ?
   - (A) ಕಾರ್ಯಾಂಗದಿಂದ ಅನುಸರಿಸಲ್ಪಟ್ಟ ಕಾನೂನಿನ ವಿಧಾನಗಳು
   - (B) ನಾಗರಿಕ ಸೇವಕ ಮತ್ತು ಮಂತ್ರಿಯ ನಡುವಿನ ಸಂಬಂಧ
   - (C) ಕಾರ್ಯಾಂಗ ತೆಗೆದುಕೊಂಡ ನಿರ್ಧಾರಗಳ ಔಚಿತ್ಯ
   - (D) ತಪ್ಪು ಮುಂಗಡ ಪತ್ರ ತಯಾರಿ ಮತ್ತು ಹಣಕಾಸಿನ ಕ್ರಮಬಾಹಿರತೆಗಳು

36. ಸಾರ್ವಜನಿಕ ಆಯ್ಕೆ ಸಿದ್ಧಾಂತಿಗಳ ಪ್ರಕಾರ ಅಧಿಕಾರಶಾಹಿ ವ್ಯವಸ್ಥೆಯಲ್ಲಿನ ಅಧಿಕಾರಿಗಳು ಕೆಳಗಿನ ಲಕ್ಷಣಗಳನ್ನು ಹೊಂದಿರುತ್ತಾರೆ. ಅವುಗಳಲ್ಲಿ ಸರಿ ಅಲ್ಲದುದನ್ನು ಆರಿಸು.
   - (A) ಈ ಅಧಿಕಾರಿಗಳಿಗೆ ಸ್ವಂತ ಹಿತಾಸಕ್ತಿಯ ಸ್ವಭಾವ ಇದೆ
   - (B) ಈ ಅಧಿಕಾರಿಗಳು ತರ್ಕಬದ್ಧ (ವಿವೇಚನಾಶೀಲ) ನಿರ್ಧಾರ ತೆಗೆದುಕೊಳ್ಳುವವರಲ್ಲ
   - (C) ಈ ಅಧಿಕಾರಿಗಳು ಪ್ರಭುತ್ವ, ಸಂಪನ್ಮೂಲ ಆಧಾರ ಮತ್ತು ಅಧಿಕಾರ ಗರಿಷ್ಠಗೊಳಿಸುವಿಕೆಯಂತಹ ಗುರಿಗಳನ್ನು ಅನುಸರಿಸಿ ಹೋಗುತ್ತಾರೆ
   - (D) ಈ ಅಧಿಕಾರಿಗಳು ಸಾರ್ವಜನಿಕ ಹಿತಾಸಕ್ತಿಯಲ್ಲಿ ತಟಸ್ಥರಲ್ಲ

37. ಗುನ್ನಾರ್ ಮಿರ್ಡಾಲ್ ದೃಷ್ಟಿಯಲ್ಲಿ ಕಡಿಮೆ ಅಭಿವೃದ್ಧಿ ಅಂದರೆ
   - (A) ಸ್ಥಿರ ಸ್ಥಿತಿಯ ಪರಿಕಲ್ಪನೆ
   - (B) ಪಾಶ್ಚಿಮಾತ್ಯೀಕರಣವನ್ನು ವಿರೋಧಿಸುವ ಪ್ರವೃತ್ತಿ
   - (C) ನಿರ್ವಹಣೆ ಸಾಮರ್ಥ್ಯಗಳು ಇಲ್ಲದಿರುವುದು
   - (D) ಸ್ಥಿರಸ್ಥಿತಿ ವಿರೋಧಿಸುವ ಚಲನಶೀಲ ಪರಿಕಲ್ಪನೆ

34. Intelligence activity, d[illegible]ity and choice activity in public [illegible]ion are related to
   - (A) Unity of command
   - (B) Hierarchy
   - (C) Decision making
   - (D) Authority

35. Audit enables to detect
   - (A) The legal procedures followed by the executive
   - (B) The relationship between civil, servant and minister
   - (C) Propriety of decisions taken by the executive
   - (D) Wrong budgeting and financial irregularities

36. According to public choice theorists, the bureaucrats have the following characteristics. Choose the odd one among these.
   - (A) The bureaucrats have self-interested nature
   - (B) The bureaucrats are not rational decision makers
   - (C) The bureaucrats pursue goals such as maximising the power, resource base and authority
   - (D) The bureaucrats are not neutral in public interest

37. Gunnar Myrdal viewed 'under development' as
   - (A) A concept of static condition
   - (B) A tendency to oppose westernization
   - (C) Lacking performance capabilities
   - (D) A dynamic concept as opposed to static conditions



www.StudentBounty.com

38. ದಕ್ಷಿಣ ಭಾರತದಲ್ಲಿ ಯಾವ ಒಂದು ರಾಜ್ಯದಲ್ಲಿ ಲೋಕಾಯುಕ್ತ ಸಂಸ್ಥೆ ಇಲ್ಲ ?

(A) ಕೇರಳ (B) ಕರ್ನಾಟಕ

(C) ಆಂಧ್ರಪ್ರದೇಶ (D) ತಮಿಳುನಾಡು

39. ಸದಿಶ ಸರಪಳಿ ತತ್ವವನ್ನು ಯಾರು ಯೋಜಿಸಿದರು ?

(A) ಹೆನ್ರಿ ಫಾಯೊಲ್

(B) ಎಲ್.ಉರ್ವಿಕ್

(C) ಫ್ರೆಡ್ರಿಕ್ ಟೇಲರ್

(D) ಚೆಸ್ಟರ್ ಐ. ಬರ್ನಾರ್ಡ್

40. ಕೆಳಗಿನವುಗಳಲ್ಲಿ ಯಾವುದು ಕರ್ನಾಟಕದಲ್ಲಿ 'ಭೂಮಿ' ಯೋಜನೆಯೊಂದಿಗೆ ಸಂಬಂಧ ಹೊಂದಿದೆ ?

(A) ಸ್ಥಳಜನ್ಯ (ಸ್ಥಳೀಯ) ಭೂಮಿ ಹಕ್ಕುಗಳು

(B) ಭೂ ಸುಧಾರಣೆಗಳು

(C) ಇ-ಆಡಳಿತದ ಮೂಲಕ ಭೂಮಿ ಹಕ್ಕುಗಳು

(D) ಅನುಸೂಚಿತ ಪ್ರದೇಶಗಳಲ್ಲಿ ಭೂಮಿಗಳು

41. "ಅಂತರರಾಷ್ಟ್ರೀಯ ರಾಜಕಾರಣವು ಒಂದು ಅಧಿಕಾರಕ್ಕಾಗಿ ಹೋರಾಟವಾಗಿದೆ ". ಈ ಹೇಳಿಕೆ ಯಾರದ್ದು ?

(A) ಮೋರ್ಟನ್ ಕೆಪ್ಲನ್

(B) ಹ್ಯಾನ್ಸ್ ಮಾರ್ಗಂಥೊ

(C) ಜಾರ್ಜ್ ಕೆನ್ನನ್

(D) ಹೆನ್ರಿ ಕೀಸಿಂಜರ್

42. "ಶಾಂತಿಗಾಗಿ ಪರಮಾಣುಗಳು " ಯೋಜನೆ ಯಾರು ಸೂಚಿಸಿದರು ?

(A) ವುಡ್ರೋ ವಿಲ್ಸನ್

(B) ಪ್ರೆಸಿಡೆಂಟ್ ಐಸನ್‌ಹೋವರ್

(C) ಪ್ರೆಸಿಡೆಂಟ್ ರೂಸ್‌ವೆಲ್ಟ್

(D) ವಿನ್‌ಸ್ಟನ್ ಚರ್ಚಿಲ್

43. ಮನುಷ್ಯನ ಸ್ವಭಾವದ ಬಗೆಗೆ ಆದರ್ಶವಾದಿ ಪಂಥದ ಕಲ್ಪನೆ ________ ಆಗಿದೆ.

(A) ಅವರು ಸ್ವಾರ್ಥಿಗಳು ಮತ್ತು ಆಕ್ರಮಣಶೀಲರು

(B) ಅವರು ಊಹಿಸಲಾಗದ ರೀತಿಯಲ್ಲಿ ವರ್ತಿಸುತ್ತಾರೆ

(C) ಅವರಲ್ಲಿ ಸ್ವಾಭಾವಿಕ ಒಳ್ಳೆಯತನವಿದೆ

(D) ಅವರದು ಅಲಕ್ಷ್ಯದ , ಅಸಡ್ಡೆಯ ನಡವಳಿಕೆ

38. One of the following states, do the 'Lokayukta' institution in Sou

(A) Kerala

(B) Karnataka

(C) Andhra Pradesh

(D) Tamil Nadu

39. The principle of scalar chain was devised by

(A) Henry Fayol

(B) L.Urwick

(C) Frederick Taylor

(D) Chester I. Bernard

40. Which among the following is linked to "Bhoomi' project in Karnataka ?

(A) Indigenous land rights

(B) Land reforms

(C) Land rights through e-governance

(D) Lands in scheduled areas

41. "International politics is a struggle for power" is the statement by

(A) Morton Kaplan

(B) Hans Morganthau

(C) George Kennan

(D) Henry Kissinger

42. 'Atoms for Peace" plan was proposed by

(A) Woodrow Wilson

(B) President Eisenhower

(C) President Roosvelt

(D) Winston Churchil

43. The assumption of Idealist school about the nature of human being is

(A) They are selfish and aggressive

(B) They behave unpredictably

(C) They have innate goodness

(D) Their behaviour is indifferent



StudentBounty.com
www.StudentBounty.com

StudentBounty.com

44. ಅಂತರರಾಷ್ಟ್ರೀಯ ಸಂಬಂಧದಲ್ಲಿ ದೇಶಗಳ ನಡುವಿನ ಕುಶಲ ತಂತ್ರದ ಅಂತರ್‌ಕ್ರಿಯೆಗಳು ಮತ್ತು ಶಸ್ತ್ರಾಸ್ತ್ರ ತಯಾರಿ ಪೈಪೋಟಿಯಂತಹ ಜಟಿಲ ಸಂದರ್ಭಗಳನ್ನು ಪರಾಮರ್ಶಿಸಲು ಕೆಳಗಿನ ಯಾವ ಆಟ ಉಪಯೋಗಿಸಬಹುದು ?

(A) ಬಾಣಸ ಸಂಪುಟ

(B) ಖೈದಿಗಳ ಇಕ್ಕಟ್ಟು

(C) ಅಂಗಸಾಧನೆಗಳು

(D) ಕಾಲ್ಚೆಂಡಾಟ

45. ಡಬ್ಲ್ಯು.ಟಿ.ಒ. ಮುಖ್ಯವಾಗಿ ಯಾವುದಕ್ಕಾಗಿರುವ ಸಂಸ್ಥೆ ?

(A) ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳ ಆರ್ಥಿಕ ಸ್ಥಿತಿ ಸುಧಾರಿಸುವುದು

(B) ಶಕ್ತಿಯುತ ರಾಷ್ಟ್ರಗಳ ವ್ಯಾಪ್ತಿಯನ್ನು ಹೆಚ್ಚಿಸುವುದು

(C) ಅಂತರರಾಷ್ಟ್ರೀಯ ವ್ಯಾಪಾರದ ಉದಾರೀಕರಣ

(D) ಸಣ್ಣ ದೇಶಗಳ ಆರ್ಥಿಕ ಸ್ಥಿತಿಯನ್ನು ನಿಯಂತ್ರಿಸುವುದು

46. ''ರಾಜ್ಯಗಳು ತಮ್ಮ ಗಡಿಗಳ ಒಳಭಾಗದಲ್ಲಿ ಏನು ನಡೆಯುತ್ತಿದೆ ಎನ್ನುವುದಕ್ಕೆ ಹೊಣೆಯಾಗಿರುತ್ತವೆ. ಈ ತತ್ವವನ್ನು ಏನೆಂದು ಕರೆಯುತ್ತಾರೆ ?

(A) ಮುನ್ರೊ ಸಿದ್ಧಾಂತ

(B) ಬುಶ್ ಸಿದ್ಧಾಂತ

(C) ಗುಜ್ರಾಲ್ ಸಿದ್ಧಾಂತ

(D) ವೆಸ್ಟ್ ಫಾಲಿಯ ಸಿದ್ಧಾಂತ

47. ಆಟದ ಸಿದ್ಧಾಂತ ''ಒಬ್ಬ ವ್ಯಕ್ತಿಯ ಲಾಭ ಇನ್ನೊಬ್ಬನ ನಷ್ಟಕ್ಕೆ ಸಮ'' ಎಂಬುದನ್ನು ಹೇಗೆ ಕರೆಯುತ್ತಾರೆ ?

(A) ಸೊನ್ನೆ-ಮೊತ್ತ ಆಟ

(B) ಸೊನ್ನೆ ಅಲ್ಲದ -ಮೊತ್ತ ಆಟ

(C) ಖೈದಿಗಳ ಇಕ್ಕಟ್ಟು

(D) ಅನುಗತವಾಗಿರುವ ಆಟ

44. To examine complex ...s in international relations like ...ic interactions and arms race ... countries one of the following game... be used.

(A) Kitchen Cabinet

(B) Prisoner's Dilemma

(C) Gymnastics

(D) Soccer

45. W.T.O. is primarily an organisation for

(A) Improving the economies of underdeveloped countries

(B) Enhancing the scope of powerful nations

(C) Liberalization of international trade

(D) Regulate the economies of small states

46. The doctrine which emphasised that "States are responsible for what goes on inside their borders" is called

(A) Munroe Doctrine

(B) Bush Doctrine

(C) Gujral Doctrine

(D) West Phalia Doctrine

47. In Game Theory, "One person's gain is equal to the other's loss" is called as

(A) Zero-sum game

(B) Non zero-sum game

(C) Prisoner's Dilemma

(D) Sequential game



www.StudentBounty.com

StudentBounty.com

48. ಪ್ರಪಂಚ ವ್ಯವಸ್ಥೆ ಸಿದ್ಧಾಂತ ಯಾರು ಪ್ರತಿಪಾದಿಸಿದರು ?

(A) ಬ್ಯಾರಿಂಗ್ಟನ್ ಮೂರ್

(B) ಇಮ್ಯಾನುವೆಲ್ ವಾಲರ್‌ಸ್ಟೀನ್

(C) ಫರ್ನಾಂಡೊ ಕೊರ್‌ಡೊಸೊ

(D) ಆ್ಯಂಡ್ರೆ ಗುಂಡರ್ ಫ್ರ್ಯಾಂಕ್

49. ಅಂತರರಾಷ್ಟ್ರೀಯ ಬಿಕ್ಕಟ್ಟನ್ನು ಬಗೆಹರಿಸಲು ಶಾಂತಿಯುತ ಕಾರ್ಯತಂತ್ರಗಳ ಬೆಳವಣಿಗೆ ಮತ್ತು ಅನುಷ್ಠಾನವನ್ನು ಹೇಗೆ ಕರೆಯುತ್ತಾರೆ ?

(A) ರಾಚನಿಕ ವಾದ

(B) ಬಿಕ್ಕಟ್ಟು ಶಮನ

(C) ನವ್ಯೋತ್ತರತೆ

(D) ನವ ವಾಸ್ತವಿಕತೆ

50. **ಪ್ರತಿಪಾದನೆ(A)** : PTBT ಮತ್ತು NPT ಸಾರ್ವತ್ರಿಕ ಜೈವಿಕ ನಿಶ್ಯಸ್ತ್ರೀಕರಣ ಸಾಧಿಸುವಲ್ಲಿ ಪೂರ್ಣವಾಗಿ ಯಶಸ್ವಿ ಆಗಿಲ್ಲ.

**ಸಮರ್ಥನೆ (R)** : ಭಾರತ ಮತ್ತು ಪಾಕಿಸ್ತಾನಗಳು NPTಗೆ ಸಹಿಹಾಕದಿದ್ದರೆ, ಬೈಜಿಕ ನಿಶ್ಯಸ್ತ್ರೀಕರಣವು ದಕ್ಷಿಣ ಏಶಿಯಾದಲ್ಲಿ ಯಶಸ್ವಿ ಆಗುವುದಿಲ್ಲ.

(A) (A) ಮತ್ತು (R) ಎರಡೂ ಸರಿ, (R) ಎಂಬುದು (A)ಯ ಸರಿಯಾದ ವಿವರಣೆ ಆಗಿದೆ

(B) (A) ಮತ್ತು (R) ಎರಡೂ ಸರಿ, ಆದರೆ (R) ಎಂಬುದು (A)ಯ ಸರಿಯಾದ ವಿವರಣೆ ಅಲ್ಲ

(C) (A) ಸರಿ ಆದರೆ (R) ತಪ್ಪು

(D) (A) ತಪ್ಪು ಆದರೆ (R) ಸರಿ

48. The World System Theory was propounded by

(A) Barrington Moore

(B) Immanuel Wallerstein

(C) Fernando Cordoso

(D) Andre Gunder Frank

49. The development and implementation of peaceful strategies for settling international tension is called

(A) Constructivism

(B) Conflict Resolution

(C) Post-Modernism

(D) Neo-Realism

50. Given below are two statements, one labelled as Assertion (A) and the other labelled as Reason (R)

**Assertion (A)** :

The PTBT and the NPT were not completely successful in achieving universal nuclear disarmament.

**Reason (R)** :

Unless India and Pakistan sign the NPT, Nuclear disarmament will not succeed in South Asia.

(A) Both (A) and (R) are true, (R) is the correct explanation of (A)

(B) Both (A) and (R) are true but (R) is not the correct explanation of (A)

(C) (A) is true but (R) is false

(D) (A) is false but (R) is true



www.StudentBounty.com

ಚಿತ್ತು ಬರಹಕ್ಕಾಗಿ ಸ್ಥಳ

Space for Rough Work



StudentBounty.com

www.StudentBounty.com

ಚಿತ್ತು ಬರಹಕ್ಕಾಗಿ ಸ್ಥಳ
Space for Rough Work



www.StudentBounty.com
StudentBounty.com